**ಸಾಕ್ಷಿಯನ್ನು ದಿಃ 01.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ-**

ನಾನು 7 ನೇ ತರಗತಿ ವರಗೂ ಓದಿರುತ್ತೇನೆ. ನನ್ನ ಖಾಯಂ ವಾಸ ವಡ್ಡಂಬಾಳು ಆಗಿರುತ್ತದೆ. ಕರೀಗೌಡ ಎಂಬುವವರು ತಿಮ್ಮೇಗೌಡರ ತಂದೆ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕರೀಗೌಡರ ಹೆಂಡತಿ ಹೆಸರು ಬೋರಮ್ಮ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ದಿನಾಂಕ ನನಗೆ ಗೊತ್ತಿಲ್ಲ. ಕರೀಗೌಡರ ಮಕ್ಕಳು ತಿಮ್ಮೇಗೌಡ, ಪುಟ್ಟಲಕ್ಷ್ಮಮ್ಮ, ಸಾವಿತ್ರಮ್ಮ ಮತ್ತು ತುಳಸಮ್ಮ. ಕರೀಗೌಡರ ಮಗ , ಹೆಣ್ಣು ಮಕ್ಕಳು ಯಾವಾಗ ತೀರಿಕೊಂಡರು ಎಂದು ದಿನಾಂಕ ನನಗೆ ಗೊತ್ತಿಲ್ಲ. ತುಳಸಮ್ಮನಿಗೆ ಎಷ್ಟು ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸಾವಿತ್ರಮ್ಮನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ತುಳಸಮ್ಮ ಗಂಡನ ಹೆಸರು ಗೊತ್ತಿಲ್ಲ, ಸಾವಿತ್ರಮ್ಮನ ಗಂಡ ಹೆಸರು ಕಾಳೇಗೌಡ, ಪುಟ್ಟಲಕ್ಷ್ಮಮ್ಮನ ಗಂಡನ ಹೆಸರು ಕೃಷ್ಣೇಗೌಡ. ಸಾವಿತ್ರಮ್ಮನ ಗಂಡನ ಹೆಸರು ಕಾಳಪ್ಪ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಪುಟ್ಟಲಕ್ಷ್ಮಮ್ಮ, ಸಾವಿತ್ರಮ್ಮ, ತುಳಸಮ್ಮ ರವರ ಮಕ್ಕಳುಗಳ ಹೆಸರುಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಕ್ಷಗಾರರು ಬರೆಸಿರಬಹುದು. ಸಾವಿತ್ರಮ್ಮ, ತುಳಸಮ್ಮ ನವರ ಮಕ್ಕಳುಗಳ ಹೆಸರುಗಳು ನನಗೆ ನಿಖರವಾಗಿ ಗೊತ್ತಿಲ್ಲ.

ಈ ದಾವೆಯನ್ನು ಉದಯ ಕುಮಾರ ಮತ್ತು ಸೋಮಶೇಖರ ಎಂಬುವವರು ಹುಣಸೂರಿನ ಬಾಲು ಎಂಬುವವರ ಮೇಲೆ ಹಾಕಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ಎಷ್ಟು ಜನರ ಮೇಲೆ ಕೇಸ್ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದು,ತಿಮ್ಮೇಗೌಡರು ಬಾಲಕೃಷ್ಣ ಗೌಡರ ಸ್ವಾಧೀನಕ್ಕೆ ಕೊಟ್ಟಿರುತ್ತಾರೆ ಎಂದು ಹಾಕಿರುತ್ತಾರೆ. ಎಷ್ಟು ಸರ್ವೆ ನಂ., ಎಷ್ಟು ಖಾಲಿ ಜಾಗ, ಎಷ್ಟು ಮನೆಗಳ ಮೇಲೆ ದಾವೆ ಹಾಕಿರುತ್ತಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಜಮೀನಿನ ಸರ್ವೆ ನಂ. ಮನೆಯ ಖಾತೆ ನಂ, ಜಂಜರ್ ನಂ ತಿಳಿದುಕೊಂಡಿಲ್ಲ. ಜಮೀನುಗಳ ಚಕ್ಕುಬಂದಿಯನ್ನು

ನಾನು ಸರಿಯಾಗಿ ಹೇಳಲಾಗುವುದಿಲ್ಲ. ನಮ್ಮ ಜಮೀನು ವಡ್ಡಂಬಾಳಿನಲ್ಲಿ ಇದೆ. ಐಟಂ ನಂ. 9 ರ ಪೂರ್ವಕ್ಕೆ ನನ್ನ ಜಮೀನು ಇದೆ ಎಂದು ಹೇಳಿದ್ದು, ಐಟಂ ನಂ. 9 ರ ಜಮೀನು ಯಾವುದು, ಅದರ ಸರ್ವೆ ನಂ, ವಿಸ್ತೀರ್ಣ ನನಗೆ ಗೊತ್ತಿಲ್ಲ. ಜಮೀನು, ಮನೆಗಳು ಖಾತೆ ಜಂಟಿ ಹೆಸರಿನಲ್ಲಿ ಇದೆ. ಜಮೀನು, ಮನೆ ಜಂಟಿ ಖಾತೆಯಲ್ಲಿ ಇದೆಯೊ ಇಲ್ಲವೊ ಎಂದು ನಾನು ದಾಖಲೆಗಳನ್ನು ಪರಿಶೀಲಿಸಿಲ್ಲ. ವಾದಿಗಳಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ**

3 ನೇ ಪ್ರತಿವಾದಿ ಏಕಪಕ್ಷಿಯ,

4 ರಿಂದ 8 ನೇ ಪ್ರತಿವಾದಿಗಳನ್ನು ಮತ್ತು ಅವರ ಪರ ವಕೀರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.